**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 29037/2018 ಚಾಸಾಃ 7 ಪ್ರಾಸಾಃ 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರ |
| ತಂದೆಯ ಹೆಸರು | : | ಬಿ.ಟಿ.ಶ್ರೀನಿವಾಸಯ್ಯ |
| ವಯಸ್ಸು | : | 51 ವರ್ಷ |
| ವೃತ್ತಿ | : | ಎ.ಎಸ್.ಐ |
| ವಾಸ | : | ಅಂಜನನಗರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 03.06.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು 2015 ರಿಂದ 2021 ರವರೆಗೆ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ04.12.2017 ರಂದು ನಾನು, ಚಾಸಾ-6 ರವರ ಕ್ರೈಂ.ಸಂ.355/2017 ರಲ್ಲಿ ಆರೋಪಿತರಾದ ರಂಜಿತ್ ಮತ್ತು ವಾಸುವನ್ನು ಪತ್ತೆ ಮಾಡಿ ಹಾಜರು ಪಡಿಸುವಂತೆ ಚಾಸಾ-8 ರವರು ಸೂಚಿಸಿರುತ್ತಾರೆ. ಅದರಂತೆ ನಾವು ಭಾತ್ಮೀದಾರರಲ್ಲಿ ಆರೋಪಿತರ ಬಗ್ಗೆ ವಿಚಾರ ಮಾಡಲಾಗಿ ಬೆಳಿಗ್ಗೆ 11.30 ರ ಸಮಯದಲ್ಲಿ ಕುರುಬರಹಳ್ಳಿ ಬಸ್ ನಿಲ್ದಾಣದ ಬಳಿ ಆರೋಪಿತರು ಇರುವುದಾಗಿ ತಿಳಿಸಿರುತ್ತಾರೆ. ಅದರಂತೆ ನಾವು ಆ ಸ್ಥಳಕ್ಕೆ ಹೋಗಿ ಭಾತ್ಮೀದಾರರಿಂದ ಆ ವ್ಯಕ್ತಿಗಳನ್ನು ಖಚಿತ ಪಡಿಸಿಕೊಂಡು ಆ ವ್ಯಕ್ತಿಗಳನ್ನು ಸುತ್ತುವರೆದು ಹೆಸರು ವಿಳಾಸ ಕೇಳಲಾಗಿ ಅವರು ತಮ್ಮ ಹೆಸರು ರಂಜಿತ್ ಮತ್ತು ವಾಸು ಎಂದು ತಿಳಿಸಿರುತ್ತಾರೆ. ಅವರಿಬ್ಬರನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ-8 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಾವು ಆ ದಿನ ಹಿಡಿದು ಚಾಸಾ-8 ರವರ ಮುಂದೆ ಹಾಜರುಪಡಿಸಿದ ಆರೋಪಿತರಿಬ್ಬರೂ ನ್ಯಾಯಾಲಯದ ಮುಂದೆ ಇದ್ದಾರೆ ಅವರಿಬ್ಬರನ್ನು ನೋಡಿ ಗುರ್ತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಆರ್.ಆರ್. ವಕೀಲರಿಂದಃ</u>**

ಚಾಸಾ-8 ರವರು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ. ಬೆಳಿಗ್ಗೆ 8.30 ಗಂಟೆಗೆ ನಾನು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ-8 ರವರು

ಪೊಲೀಸ್ ಠಾಣೆಯಲ್ಲಿ ಇದ್ದರು. ಬೆಳಿಗ್ಗೆ 11.00 ಗಂಟೆಗೆ ನನ್ನನ್ನು ಕರೆದು ಹೋಗಲು ಹೇಳಿದರು. ಬೆಳಿಗ್ಗೆ 8.30 ರಿಂದ 11.00 ಗಂಟೆಯ ಅವಧಿಯಲ್ಲಿ ಠಾಣೆಯ ಸರಹದ್ದಿನಲ್ಲಿ ಗಸ್ತು ಕರ್ತವ್ಯದಲ್ಲಿದ್ದೆನು. ಆ ಸಮಯದಲ್ಲಿ ಚಾಸಾ-6 ರವರು ಕೂಡ ನನ್ನೊಂದಿಗೆ ಗಸ್ತಿನಲ್ಲಿದ್ದರು. ನಮ್ಮನ್ನು ಚಾಸಾ-8 ರವರು ಕರೆದಾಗ ಆರೋಪಿತರ ಚಹರೆ ಮತ್ತು ಫೊಟೋಗಳನ್ನು ಕೊಟ್ಟಿಲ್ಲ. ಆರೋಪಿತರ ಎತ್ತರ ಮತ್ತು ಬಣ್ಣ ಗೊತ್ತಿರಲಿಲ್ಲ. ಆರೋಪಿತರ ಎತ್ತರ, ಬಣ್ಣ ಮತ್ತು ಚಹರೆಯನ್ನು ಭಾತ್ಮಿದಾರರಿಗೆ ಹೇಳಿಲ್ಲ ಹಾಗೂ ಆರೋಪಿತರ ಫೋಟೋವನ್ನು ಸಹ ಭಾತ್ಮೀದಾರರಿಗೆ ತೋರಿಸಲಿಲ್ಲ. ಬಸವೇಶ್ವರನಗರ ಕುರುಬರಹಳ್ಳಿ ವೃತ್ತವು ದೊಡ್ಡ ಜನಸಂದಣಿ ಸೇರುವಂತಹ ಸ್ಥಳ ಎಂದರೆ ಸರಿ. ಚಹರೆ ಮತ್ತು ಫೊಟೋ ಇಲ್ಲದೆ ಇದ್ದಾಗ ದೊಡ್ಡ ಜನಸಂದಣಿ ಇರುವಲ್ಲಿ ಆರೋಪಿತರನ್ನು ಕಂಡು ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ನಾವು ಭಾತ್ಮೀದಾರರಿಗೆ ಫೋಟೋ ತೋರಿಸಿದ ಕಾರಣ ನಾವು ಕುರುಬರಹಳ್ಳಿ ವೃತ್ತದಿಂದ ಕರೆದುಕೊಂಡು ಬಂದಿಲ್ಲ ಎಂದರೆ ಸುಳ್ಳು. ಸುಮಾರು 07 ವರ್ಷ ಆಗಿದ್ದರಿಂದ ಆರೋಪಿತರು ಆ ದಿನ ಯಾವ ಬಣ್ಣದ ಶರ್ಟ್ ಪ್ಯಾಂಟ್ ಧರಿಸಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಆರೋಪಿತರನ್ನು ಆ ರೀತಿ ಕರೆದುಕೊಂಡು ಬಂದ ಕಾರಣ ಚಾಸಾ-8 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**